<u>ದಿಃ 19.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿಸವಾಲುಃ ಶ್ರೀ ಸಿ.ಆರ್.ಕೆ., 1(ಎ)ನೇ ಪ್ರತಿವಾದಿಯ ವಾರಸುದಾರರ ಪರ ವಕೀಲರಿಂದಃ</u>

1. ನಾನು Prestige Group of Companies ನಲ್ಲಿ Executive Director ಆಗಿದ್ದೇನೆ. ಸದರಿ ಕಂಪನಿಯು Real Estate ವ್ಯವಹಾರ ನಡೆಸುತ್ತದೆ. ನಾವು ದಾವಾ ಸ್ವತ್ತನ್ನು ಖರೀದಿಸುವ ಕಾಲದಲ್ಲಿ ಯಾವೆಲ್ಲ ದಾಖಲೆಗಳನ್ನು ಪರಿಶೀಲಿಸಿದ್ದೇವೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನಾವು ಕ್ರಯಕ್ಕೆ ಸಂಬಂಧಿಸಿದಂತೆ ಪಡೆದುಕೊಂಡ ಯಾವುದೇ ದಾಖಲೆಗೆ 1 ನೇ ಪ್ರತಿವಾದಿ, ಆಕೆಯ ಮಗನಾದ ರಾಮಸ್ವಾಮಿ ಅಥವಾ ರಾಮಸ್ವಾಮಿಯವರ ಯಾವುದೇ ವಾರಸುದಾರರು ಸಹಿ ಮಾಡಿಲ್ಲ ಎಂದರೆ ಇರಬಹುದು.

2. ದಾವಾ ಸ್ವತ್ತುಗಳು ಮೂಲತಃ 1 ನೇ ಪ್ರತಿವಾದಿಯ ತಂದೆ ಮುನಿಗ ಅಲಿಯಾಸ್ ಚಿಕ್ಕತಾಯಪ್ಪನವರಿಗೆ ಸೇರಿತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತು ದೊಡ್ಡಗುಳ್ಳಪ್ಪನವರಿಗೆ ಸೇರಿತ್ತು. ಮುನಿಗ ಅಲಿಯಾಸ್ ಚಿಕ್ಕತಾಯಪ್ಪ ನವರ 4 ಜನ ಗಂಡು ಮಕ್ಕಳು ಹಾಗು ಓರ್ವ ಮಗಳು ಇವರಲ್ಲಿ ದೊಡ್ಡಗುಳ್ಳಪ್ಪನವರು ಒಬ್ಬ ಮಗ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಮುನಿಗ ಅಲಿಯಾಸ್ ಚಿಕ್ಕತಾಯಪ್ಪನವರ ಮಗಳು ಎಂದರೆ ನನಗೆ ಗೊತ್ತಿಲ್ಲ. ದೊಡ್ಡಗುಳ್ಳಪ್ಪ , ಚಿಕ್ಕಗುಳ್ಳಪ್ಪ, ನಾರಾಯಣಪ್ಪ ಮತ್ತು ರಾಮಯ್ಯ ಎನ್ನುವವರು ಮುನಿಗ ಅಲಿಯಾಸ್ ಚಿಕ್ಕತಾಯಪ್ಪನವರ ನಾಲ್ಕು ಜನ ಗಂಡು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಮುನಿಗ ಅಲಿಯಾಸ್ ಚಿಕ್ಕತಾಯಪ್ಪನವರ 5 ಜನ

ಮಕ್ಕಳಿಗೂ ದಾವಾ ಸ್ವತ್ತಿನಲ್ಲಿ ತಲಾ 5 ನೇ ಒಂದು ಭಾಗದ ಹಕ್ಕು ಇದೆ ಎಂದರೆ ಸರಿಯಲ್ಲ.

3. ಮುನಿಗ ಅಲಿಯಾಸ್ ಚಿಕ್ಕತಾಯಪ್ಪ ಮತ್ತು ಅವರ ಮಕ್ಕಳು ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ 1 ರಿಂದ 3 ರಲ್ಲಿನ ಸ್ವತ್ತುಗಳು ಮುನಿಗ ಅಲಿಯಾಸ್ ಚಿಕ್ಕತಾಯಪ್ಪನವರಿಗೆ ಸರ್ಕಾರದಿಂದ ಮಂಜೂರಾಗಿದ್ದ ಸ್ವತ್ತುಗಳು ಎಂದರೆ ಸರಿಯಲ್ಲ. ಈ ಸ್ವತ್ತುಗಳು 1962 ರಲ್ಲಿ ದೊಡ್ಡಗುಳ್ಳಪ್ಪನವರು ಖರೀದಿ ಮಾಡಿದ ಸ್ವತ್ತುಗಳಾಗಿವೆ. ಈ ಸ್ವತ್ತುಗಳು ದೊಡ್ಡಗುಳ್ಳಪ್ಪನವರು ಖರೀದಿ ಮಾಡಿದ ಸ್ವತ್ತುಗಳು ಎಂದು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

4. ದಾವಾ ಐಟಂ 4 ಮತ್ತು 5 ರ ಸ್ವತ್ತುಗಳು ತೋಟಿ ಇನಾಯಿತಿ ಜಮೀನುಗಳು ಎಂದರೆ ನಿಜ. ಈ ಸ್ವತ್ತುಗಳು ಮುನಿಗ ಅಲಿಯಾಸ್ ಚಿಕ್ಕತಾಯಪ್ಪನವರಿಗೆ ಸರ್ಕಾರದಿಂದ ತೋಟಿ ಇನಾಯಿತಿ ರದ್ದತಿ ಕಾಯ್ದೆಯ ಅನ್ವಯ ಮಂಜೂರಾದ ಸ್ವತ್ತುಗಳು ಎಂದರೆ ಸರಿಯಲ್ಲ.

5. ದಾವಾ ಐಟಂ 1 ರಿಂದ 5 ರಲ್ಲಿ ಹೇಳಲಾದ ಸ್ವತ್ತುಗಳನ್ನು ಮಾರಾಟ ಮಾಡುವ ಕುರಿತಂತೆ ಸರ್ಕಾರದಿಂದ ಯಾವುದೇ ಅನುಮತಿಯನ್ನು ಪಡೆದಿಲ್ಲ ಎಂದರೆ ನಿಜ. ಮುನಿಗ ಅಲಿಯಾಸ್ ಚಿಕ್ಕತಾಯಪ್ಪ ಮತ್ತು ಅವರ ಮಕ್ಕಳ ನಡುವೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಈವರೆಗೆ ವಿಭಾಗ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈವರೆಗೂ ಮುನಿಗ ಅಲಿಯಾಸ್ ಚಿಕ್ಕತಾಯಪ್ಪ ನವರ ವಾರಸುದಾರರು ದಾವಾ ಸ್ವತ್ತುಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

6. ನಮ್ಮ ಪರವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಲಾದ ದಾಖಲೆಗಳು ಪ್ರಕರಣದ ಸಲುವಾಗಿ ಸೃಷ್ಟಿಸಿ ಹಾಜರುಪಡಿಸಿದ ದಾಖಲೆಗಳಾಗಿವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳಲ್ಲಿ 5 ನೇ ಒಂದು ಭಾಗದ ಹಕ್ಕು ಇದ್ದರೂ ಅವರಿಗೆ ಈ ಸ್ವತ್ತುಗಳಲ್ಲಿ ಯಾವುದೇ ಹಕ್ಕಿಲ್ಲ ಎಂದು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.